ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್‌ಕೇಸ್ ನಂಬರ್ : 234/2022**

**ಫ್ರಾಸಾ-1** **ಚಾಸಾ- 3**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಯೋಗೇಶ್ |
| ತಂದೆಯ ಹೆಸರುಃ | : | ಗಂಗಾನಾಯಕ |
| ವಯಸ್ಸುಃ | : | 26 ವರ್ಷ |
| ಉದ್ಯೋಗಃ | : | ವ್ಯವಸಾಯ |
| ವಾಸ | : | ಜಕ್ಕವಳ್ಳಿ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:08-04-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಚಾಸಾ-1 ಮತ್ತು 2 ನನ್ನ ಅತ್ತೆಯ ಮಕ್ಕಳು. ಚಾಸಾ-4 ರಿಂದ 7 ರವರು ಗೊತ್ತು. ನನ್ನ ತಂದೆ ಹೆಸರು ಗಂಗಾನಾಯಕ, ಅವರು ಈಗ ಬದುಕಿಲ್ಲ. ನ್ಯಾಯಾಲಯದ ಮುಂದಿರುವ ಕಾ.ಸಂ.ಒ.ಬಾಲಕ (ಇನ್ನು ಮುಂದೆ ಕೇಶವಮೂರ್ತಿ ಎಂದು ಪರಿಗಣಿಸಲಾಗುತ್ತದೆ) ಪರಿಚಯವಿದೆ ನಮ್ಮೂರಿನವರು. ಚಾಸಾ-11 ನನ್ನ ಅಣ್ಣ. ಈಗ್ಗೆ 8 ವರ್ಷಗಳ ಹಿಂದೆ ಗಂಗಾಧರ, ಕೇಶವಮೂರ್ತಿ, ಜಯಲಕ್ಷ್ಮಿ, ನಂಜಮ್ಮ ಲೋಕೇಶ ಇವರೆಲ್ಲರೂ ಹಲ್ಲೆ ಮಾಡಿದ ಕಾರಣ ಮೃತಪಟ್ಟಿರುತ್ತಾರೆ. ನಮ್ಮ ಮತ್ತು ಆರೋಪಿತರ ಜಮೀನು ಅಕ್ಕಪಕ್ಕದಲ್ಲಿ ಇರುತ್ತದೆ. ಈ ಘಟನೆಗಿಂತ 10 ವರ್ಷಗಳ ಹಿಂದೆ ಜಮೀನು ವಿಚಾರದಲ್ಲಿ ಕೇಶವಮೂರ್ತಿ ಮತ್ತು ಇತರ ಆರೋಪಿತರು ಹಾಗೂ ನಮ್ಮ ನಡುವೆ ತಕರಾರು ಇತ್ತು. ಈ ಘಟನೆಗಿಂತ ಹತ್ತು ದಿನಗಳ ಮುಂಚೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಅಲ್ಲಿ ಪೊಲೀಸರು ಇಬ್ಬರನ್ನು ಕರೆಸಿ ರಾಜಿ ಮಾಡಿ ಸರ್ವೆ ಮಾಡಿಕೊಳ್ಳುವಂತೆ ತಿಳಿಸಿದ್ದರು. ಅದರಂತೆ ನಾವು 28-11-18ರಂದು ಸರ್ವೆ ಮಾಡಿದ ನಂತರ ವಾಪಸ್ ಮನೆಗೆ ಬಂದಿದ್ದೆವು. ಸಂಜೆ ಜಮೀನು ಕೆಲಸಕ್ಕೆಂದು ನಾನು, ಚಾಸಾ-1 ಮತ್ತು 2 ರವರು ಜಮೀನಿನ ಬಳಿ ಹೋಗಿದ್ದೆವು. ಆಗ ಆರೋಪಿತರು ಜಮೀನು ಇನ್ನು ಹಂಚಿಕೆಯಾಗಿಲ್ಲ ನಮಗೆ ಇನ್ನೂ ಜಾಗ

ಬರಬೇಕು, ನೀವು ಜಾಗ ಬಿಡಬೇಕೆಂದು ಕೇಶವಮೂರ್ತಿ ಮತ್ತು ಇತರ ಆರೋಪಿತರು ಜಗಳ ಮಾಡಿ ಹಲ್ಲೆ ಮಾಡಿದರು. ನನಗೆ ಗಂಗಾಧರ ಹೆಡೆಮಟ್ಟೆಯಿಂದ ತಲೆಗೆ ಹೊಡೆದನು, ಚಾಸಾ-1 ಮತ್ತು 2 ರವರಿಗೂ ಕೂಡ ಗಂಗಾಧರ ದೊಣ್ಣೆ ಮತ್ತು ಹೆಡೆಮಟ್ಟೆಯಿಂದ ಹಲ್ಲೆ ಮಾಡಿದನು. ನಂತರ ನಾವು ಮನೆ ಬಳಿ ಬಂದೆವು. ಆ ವಿಚಾರವನ್ನು ನನ್ನ ತಂದೆ ಬಳಿ ತಿಳಿಸಿದೆವು. ಆಗ ನನ್ನ ತಂದೆಯು ಹೋಗಿ ಕೇಳೋಣ ಎಂದು ನಮ್ಮನ್ನು ಜಮೀನಿನ ಬಳಿ ಕರೆದುಕೊಂಡು ಬಂದರು. ನನ್ನ ತಂದೆ ಮತ್ತು ಚಾಸಾ-1, 4 ರವರು ಒಂದು ಬೈಕಿನಲ್ಲಿ ನಾನು, ಚಾಸಾ-2 ಮತ್ತು 5 ರವರು ಇನ್ನೊಂದು ಬೈಕಿನಲ್ಲಿ ಹೋದೆವು. ಆಗ ಕೇಶವಮೂರ್ತಿ ಮತ್ತು ಇತರ ಆರೋಪಿತರು ಕೈಯಲ್ಲಿ ಕುಡ್ಲು ದೊಣ್ಣೆ ಮಚ್ಚು ಮತ್ತು ಖಾರದಪುಡಿ ಹಿಡಿದುಕೊಂಡು ನಿಂತಿದ್ದರು. ನನ್ನ ತಂದೆ ಏಕೆ ಹಲ್ಲೆ ಮಾಡಿದ್ದೀರಾ ಎಂದು ಕೇಳಿದಾಗ ಗಂಗಾಧರ ನನ್ನ ತಂದೆಗೆ ಕುಡ್ಲು ಮಚ್ಚಿನಿಂದ ತಲೆಗೆ ಹಲ್ಲೆ ಮಾಡಿದರು. ಅವರಿಗೆ ರಕ್ತಗಾಯ ವಾಗಿ ಕೆಳಕ್ಕೆ ಬಿದ್ದರು. ಚಾಸಾ-5 ಮತ್ತು 4 ರವರು ಬಿಡಿಸಲು ಹೋದಾಗ ಅವರಿಗೂ ಹಲ್ಲೆ ಮಾಡಲು ಬಂದರು. ಆಗ ಅವರು ಬದಿಗೆ ಹೋಗಿ ನಿಂತರು. ಚಾಸಾ-1 ರವರಿಗೆ ಗಂಗಾಧರ ಮಚ್ಚಿನಿಂದ ಹಲ್ಲೆ ಮಾಡಿದರು. ಕೇಶವಮೂರ್ತಿ ನನ್ನ ತಂದೆಗೆ ದೊಣ್ಣೆಯಿಂದ ಹಲ್ಲೆ ಮಾಡಿದರು. ಚಾಸಾ-2ರವರಿಗೆ ಲೋಕೇಶ ಕುಡ್ಲುನಿಂದ ಹಲ್ಲೆ ಮಾಡಿದನು. ಅವರ ಎಡಕೈಬೆರಳು ತುಂಡಾಗಿತ್ತು. ನನ್ನ ತಂದೆಯನ್ನು ಹೊಳೆನರಸೀಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ನಂತರ ಹಾಸನದ ಎಸ್ ಎಸ್ ಎಂ ಆಸ್ಪತ್ರೆಗೆ ಕರೆದುಕೊಂಡು ಬಂದೆವು, ಅಲ್ಲಿಂದ ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ಅಲ್ಲಿಂದ ಬೆಂಗಳೂರಿನ ಮೆಡಿಕೇರ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಚಿಕಿತ್ಸೆ ಫಲಕಾರಿಯಾಗದೆ ನನ್ನ ತಂದೆ ತೀರಿಕೊಂಡರು. ಜಮೀನಿನ ವಿಚಾರವಾಗಿ ಕೇಶವಮೂರ್ತಿ ಮತ್ತು ಇತರ ಆರೊಾಪಿತರು ನನ್ನ ತಂದೆಗೆ ಹಲ್ಲೆ ಮಡಿರುತ್ತಾರೆ. ಈ ಸಂಬಂಧವಾಗಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರು ಹಲ್ಲೆಗೆ ಬಳಸಿದ್ದ ಮಚ್ಚು, ಕುಡುಗೋಲು ಮತ್ತುದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಮಚ್ಚು, ಕುಡುಗೋಲು ಮತ್ತು ದೊಣ್ಣೆ ಅವುಗಳೆ ಆಗಿರುತ್ತವೆ. ಅವುಗಳನ್ನು ಎಂ.ಒ.1 ರಿಂದ 3 ಎಂದು ಗುರುತಿಸಲಾಯಿತು. (ಎಂ.ಒ.1 ರಿಂದ 3 ನ್ನು ಎಸ್ ಸಿ 122/19ರಿಂದ ತರಿಸಿಕೊಂಡು ಗುರುತಿಸಿಕೊಳ್ಳಲಾಗಿದೆ) ಆ ದಿವಸ ನನ್ನ ತಂದೆ ಬಿಳಿ ಶರ್ಟು ಮತ್ತು ಪಂಚೆ ಧರಿಸಿದ್ದರ. ನನ್ನ ತಂದೆಗೆ ಹಲ್ಲೆ ಮಾಡಿದ ಕೇಶವಮೂರ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಆತ ನ್ಯಾಯಾಲಯದ ಮುಂದಿರುವ ಕಾ.ಸಂ.ಒ.ಬಾಲಕ ಆಗಿರುತ್ತಾನೆ.

**ಪಾಟೀಸವಾಲುಃ ಕಾ.ಸಂ.ಒ.ಬಾಲಕನ ಪರ ವಕೀಲರಿಂದಃ**

(ಕಾ.ಸಂ.ಒ.ಬಾಲಕನ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು,ಸಕಾರಣ ಕಂಡುಬಾರದ ಕಾರಣ ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಗಿದೆ)

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**